ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 118-124
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮಹಿಳಾ ನಿರ್ದೇಶನದ ಚಲನಚಿತ್ರಗಳು ಮತ್ತು 'ಸ್ತ್ರೀ' ಪ್ರತಿನಿಧೀಕರಣ

**ಆರ್. ಅಶೋಕ್ ನಾಯಕ ಕುಡತಿನಿ**
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**Abstract:**
*ಆಧುನಿಕ ಕಾಲದ ಅತ್ಯಾಕರ್ಷಕ ಮನರಂಜನೆ ಚಲನಚಿತ್ರವಾಗಿದ್ದರೆ, ಅದಕ್ಕೆ ಎಲ್ಲ ವರ್ಗಗಳ ಜನರ ಪ್ರೋತ್ಸಾಹ ದೊರೆತಿದ್ದೇ ಕಾರಣವೆನ್ನಬಹುದು. ಅತ್ಯಂತ ವೇಗವಾಗಿ ಹಣ, ಕೀರ್ತಿ, ಪ್ರತಿಷ್ಠೆ ಎಲ್ಲವನ್ನೂ ತರುವ ಬೇಗ ಹಳತನ್ನು ಮರೆಸುವ ರಜತರಂಗ ಯುವ ಜನಾಂಗದ ಕನಸಿನ ಗೋಪುರವೆನ್ನಬಹುದು, ಚಲನಚಿತ್ರಗಳಲ್ಲಿ ಲಿಂಗವ್ಯವಸ್ಥೆಯ ಬೇರು ಬಹು ಆಳವಾಗಿ ಬೇರೂರಿದೆ. ನಾಯಕ ಹಾಗೂ ಇನ್ನಿತರ ಪುರುಷ ಪಾತ್ರಗಳ ಮುಂದೆ ಸ್ತ್ರೀಅಬಲೆ ಕೇವಲ ಸೌಂದರ್ಯ, ಮಮತೆ, ಪ್ರಣಯ ಮುಂತಾದವುಗಳನ್ನು ಪ್ರದರ್ಶಿಸುವುದು ಮಾತ್ರವೇ ನಾಯಕಿಗಿದ್ದ ಲಕ್ಷಣಗಳಾಗಿತ್ತು. ನಾಯಕನಂತೂ ಪುರುಷಸಿಂಹ, ಹತ್ತಾರು ವೈರಿಗಳನ್ನು ಏಕಕಾಲದಲ್ಲಿ ಸದೆ ಬಡಿದು ಅಸಹಾಯಕ ಸುಂದರಿಯನ್ನು ಕೈಹಿಡಿದು ಅವಳ ಜೀವನವನ್ನು ಪಾವನ ಮಾಡುವ ಸಿನಿಮಾ ಕತೆಗಳು ಲೆಕ್ಕವಿಲ್ಲದಷ್ಟು ಬಂದು ಹೋಗಿವೆ. ಅನಂತರ ಸಾಮಾಜಿಕ ಸಮಸ್ಯೆಗಳಾದ ವರದಕ್ಷಿಣೆ, ವೃದ್ಧ ವರ ಎಳೆಯ ವಧು, ಮುಂತಾದವುಗಳಾದವು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಫಣಿಯಮ್ಮ, ದೇವೀರಿ, ಮುಖಪುಟ, ಯಾನ, ಕಿರುಗೂರಿನ ಗಯ್ಯಾಳಿಗಳು ಚಲನಚಿತ್ರಗಳಲ್ಲಿ ಕಂಡುಬರುವ ಸ್ತ್ರೀ ಪ್ರತಿನಿಧೀಕರಣವನ್ನು ಕುರಿತು ಚರ್ಚಿಸಲಾಗಿದೆ.*

**Keywords:** *ಕಲಾ ಮಾಧ್ಯಮ, ಚಲನಚಿತ್ರ, ನಿರ್ದೇಶನ, ಮಹಿಳೆ, ಸ್ತ್ರೀ ಪ್ರತಿನಿಧೀಕರಣ*

## ಪೀಠಿಕೆ

ಸ್ತ್ರೀ ಪುರುಷರ ನಡುವಣ ಸಂಬಂಧ, ಸ್ತ್ರೀ ನೆಲೆಯಲ್ಲಿ ಸಾಮಾಜಿಕ ವಿಶ್ಲೇಷಣೆಯ ಫಣಿಯಮ್ಮ, ಕಥಾಸಂಗಮದಂತಹ ಚಿತ್ರಗಳು ಬಂದವು. ತೀವ್ರ 'ಮೆಲೋಡ್ರಾಮ' ಅತಿ ನಾಟಕೀಯತೆಯಿಂದಾಗಿ ಕೇವಲ ದುಃಖದ, ರೋಷದ ಮಹಿಳಾ ಮನೋವೈಜ್ಞಾನಿಕ ಕತೆ, ಪಾತ್ರಗಳುಳ್ಳ ಶರಪಂಜರದಂಥ ಚಿತ್ರಗಳು ಮನಸ್ಸಿನ ಮೇಲೆ ಪರಿಣಾಮ ಬೀರಿದರೂ, ಅದರಿಂದ ಮಹಿಳೆಯರ ಸ್ಥಾನಮಾನ ಅಥವಾ ಲಿಂಗವ್ಯವಸ್ಥೆಯ ಮೇಲೆ ಹೆಚ್ಚಿನ ಪರಿಣಾಮ ಬೀರಲಿಲ್ಲ. ಚಲನಚಿತ್ರಗಳಲ್ಲಿ ಮಹಿಳೆಯರನ್ನು ಕ್ರೌರ್ಯ, ದೌರ್ಜನ್ಯ, ಲೈಂಗಿಕ ಪ್ರಚೋದನೆ, ಅಶ್ಲೀಲ ಸಂಭಾಷಣೆಯ ಮೂಲಕ ಕೆಳಮಟ್ಟದಲ್ಲಿ ಚಿತ್ರಿಸಲಾಗುತ್ತದೆ. ಅನೇಕ ಆಮಿಷಗಳನ್ನು ತೋರಿಸಿ ಎಳೆವಯಸ್ಸಿನ ಹುಡುಗಿಯರನ್ನು ಸಿನಿಮಾ ಕ್ಷೇತ್ರಕ್ಕೆ ಎಳೆಯಲಾಗುತ್ತದೆ. ಕ್ಯಾಮೆರಾದ ಮುಂದೆ ಬರುವುದಕ್ಕೂ ಮುಂಚೆಯೇ ಶೋಷಿತಳಾಗುತ್ತಾಳೆ. ಎಷ್ಟೋ ಮಂದಿ ಹುಡುಗಿಯರು ಮನೆಬಿಟ್ಟು, ಚಲನಚಿತ್ರ ನಟಿಯರಾಗುವ ಮರೀಚಿಕೆಯ ಬೆನ್ನಟ್ಟಿ ಕೊನೆಗೆ ವೇಶ್ಯಾಗೃಹಗಳನ್ನು ಸೇರುತ್ತಾರೆಂಬ ವರದಿಗಳನ್ನು ಓದುತ್ತೇವೆ. ಸುಳ್ಳು ಕಂಪನಿಗಳು, ಹುಡುಗ ಹುಡುಗಿಯರನ್ನು ಜಾಹೀರಾತಿನ ಮೂಲಕ

**Please cite this article as:** ಅಶೋಕ್ ನಾಯಕ ಕುಡತಿನಿ, ಆರ್. (2025). ಮಹಿಳಾ ನಿರ್ದೇಶನದ ಚಲನಚಿತ್ರಗಳು ಮತ್ತು 'ಸ್ತ್ರೀ' ಪ್ರತಿನಿಧೀಕರಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 4(3), 118–124

ಕರೆಸಿಕೊಂಡು ವಿವಿಧ ಬಗೆಯ ದಂಧೆಗಳಿಗೆ ಬಲಿಪಶುಗಳನ್ನಾಗಿ ಮಾಡುವ ವಿಷಯ ಅನೇಕ ಬಾರಿ ಪ್ರಕಟವಾಗುತ್ತದೆ.

**ಫಣಿಯಮ್ಮ ಚಲನಚಿತ್ರ ಮತ್ತು 'ಸ್ತ್ರೀ' ಪ್ರತಿನಿಧೀಕರಣ**

ಫಣಿಯಮ್ಮ ಸಿನಿಮಾವು ಎಂ.ಕೆ ಇಂದಿರಾರವರ ಕಾದಂಬರಿ ಆಧಾರಿತ ಚಿತ್ರವಾಗಿದೆ. ಒಂದು ಕಾದಂಬರಿಯನ್ನು ಬರೆವಣಿಗೆ ಬಲ್ಲವರು ಮಾತ್ರ ಓದಲು ಸಾಧ್ಯ. ಹೀಗಿರುವಾಗ ಸಾಮಾಜಿಕ ಕಳಕಳಿ ಹೊಂದಿರುವ ಕಾದಂಬರಿಗಳನ್ನು ಪ್ರೇಕ್ಷಕರ ಮುಂದೆ ತರುವ ಪ್ರಯತ್ನಗಳು ನಡೆದಿವೆ. ಅವುಗಳಲ್ಲಿ ಈ ಫಣಿಯಮ್ಮ ಮೂವಿ ಒಂದು. ಈ ಸಿನಿಮಾದಲ್ಲಿ ಜಾತಿಪದ್ಧತಿ, ಸ್ತ್ರಿಯರ ಸ್ಥಾನಮಾನ, ಬಾಲ್ಯವಿವಾಹ, ವೈಧವ್ಯ, ಬಂಜೆತನ ಇನ್ನೂ ಹಲವಾರು ವಿಷಯಗಳ ಕುರಿತು ಚರ್ಚಿಸಲಾಗಿದೆ.

ಜಾತಿವ್ಯವಸ್ಥೆಯನ್ನು ನಾವು ಈ ಚಿತ್ರದಲ್ಲಿ ನೋಡುವುದಾದರೆ ಅತಿಯಾಗಿ ಬಿಂಬಿಸದೆ ಇದ್ದರೂ ಸ್ವಲ್ಪಮಟ್ಟಿಗೆ ಬಿಂಬಿಸಲಾಗಿದೆ. ಜಾತಿ ಪದದ ಅರ್ಥವನ್ನು ತಿಳಿಯದಿದ್ದರೂ ಆದರ ಆಚರಣೆಯಲ್ಲಿ ಯಾವ ಕುಂದುಕೊರತೆ ಇರುತ್ತಿರಲಿಲ್ಲ, ಇಂತಹ ಪರಿಸ್ಥಿತಿಯಲ್ಲಿ ಫಣಿ ಲೋಕದ ನಿಯಮವನ್ನು ಪಾಲಿಸದೆ ಈ ವ್ಯವಸ್ಥೆಯಿಂದಾಚೆಗೆ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸುವಳು. ಮೇಲ್ನೋಟಕ್ಕೆ ಫಣಿಯಮ್ಮ ಆಚಾರಗಳಿಗೆ ಕಟ್ಟುಬಿದ್ದಿರುವಾಕೆ ಅವಳ ವೇಷಭೂಷಣ ವಿಚಾರಗಳು ಮಾತ್ರ ಅದಕ್ಕೆ ತದ್ವಿರುದ್ಧವಿದ್ದವು. ಬೈರನ ಹೆಂಡತಿ ಸಿಂಕಿಯ ಹೆರಿಗೆ ಸಮಯದಲ್ಲಿ ಈ ಜಾತಿಯ ನೀತಿಗಳನ್ನು ಪುಡಿ ಪುಡಿ ಮಾಡುತ್ತಾಳೆ. ಮನೆಮಂದಿಗಷ್ಟೇ ಸಿಮೀತವಾದ ಬಾಣಂತನದ ಸೇವಾ ಕ್ಷೇತ್ರವು ಅಸ್ಪೃಶ್ಯರ ಕೇರಿಯವರೆಗೂ ಹರಡುತ್ತದೆ. ತನ್ನ ಹೆಂಡತಿ ಮತ್ತು ಮಗು ಪ್ರಾಣ ಹೋಗುವ ಸಮಯದಲ್ಲೂ ಬೈರ ಲೋಕದ ಭಯವನ್ನು ತೊರೆಯುವುದಿಲ್ಲ. ಜಾಪಿನಪ್ಪಿ ಇದನ್ನೆಲ್ಲ ಮೆಟ್ಟಿ ಫಣಿಯಮ್ಮನನ್ನು ಕರೆಯುವಳು. ಈ ಸನ್ನಿವೇಶವು ನಮಗೆ ಜಾತಿವ್ಯವಸ್ಥೆಯನ್ನು ತೊಡೆದು ಹಾಕುವ ಮುನ್ನುಡಿಯಾಗಿದೆ.

ಬ್ರಾಹ್ಮಣ್ಯವು ಬೇರೆ ಬೇರೆ ಜಾತಿಗಳ ಸಂದರ್ಭದಲ್ಲಿ ಮಾತ್ರ ತಾರತಮ್ಯಗಳನ್ನು ಹಾಗೂ ಮೈಲಿಗೆಗಳನ್ನು ಸೃಷ್ಟಿಸುವುದಿಲ್ಲ. ಸ್ವತಃ ತನ್ನ ಸಮುದಾಯದ ಮಹಿಳೆಯರ ಸಂದರ್ಭದಲ್ಲಿಯೂ ತಾರತಮ್ಯಗಳನ್ನು ಹಾಗೂ ಮೈಲಿಗೆಗಳನ್ನು ಸೃಷ್ಟಿಸುತ್ತದೆ. ಬ್ರಾಹ್ಮಣರ ಮನೆಗಳಲ್ಲಿ ಹೆಣ್ಣಿನ ಜೈವಿಕ ಕ್ರಿಯಗೆ ಅನುಗುಣವಾಗಿ ಕೋಣೆಗಳನ್ನು ಸೃಷ್ಟಿಸಿದ್ದರು. ಇವುಗಳಿಂದಲೇ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನ ಎಷ್ಟು ಶೋಚನೀಯ ಎನ್ನುವುದು ತಿಳಿಯುತ್ತದೆ. ಆಡುವ ವಯಸ್ಸಿನಲ್ಲಿ ನಾಲ್ಕು ಗೋಡೆಗಳ ಮಧ್ಯ ಕಳೆಯುವ ಪರಿಸ್ಥಿತಿ ಫಣಿಯಮ್ಮ ಅನುಭವಿಸ ಬೇಕಾಯಿತು. ಯಾರೊದೋ ತಪ್ಪಿಗೆ ಫಣಿಗೆ ಶಿಕ್ಷೆ. ಕೇಶವು ಹೆಣ್ಣಿಗೆ ಅಲಂಕಾರ ನಿಜ. ಅದರೆ, ಅದೇ ಶಾಶ್ವತವಲ್ಲ. ಜೊತೆಗೆ ಜಡೆ ಕತ್ತರಿಸುವುದು ಅಪಶಕುನ ಅಲ್ಲ. ಇದನ್ನು ಅರಿಯದೆ ಹಸು ಕಂದಮ್ಮ ಎನ್ನದೆ ಅವಳನ್ನು ಒಂದು ಕತ್ತಲೆ ಕೋಣೆಯಲ್ಲಿ ಇಡುವರು. ಈ ವಿಚಾರ ಗಂಡನ ಮನೆಗೆ ಗೊತ್ತಾದರೆ ಹೇಗೆ ಎನ್ನುವ ಪ್ರಶ್ನೆ, ಇದರಿಂದ ಅವರು ಏನೆಂಬುವರು ಎಂಬ ಭಯ. ಯಾವುದು ಇಲ್ಲಿ ಮುಕ್ತವಾಗಿ ಚರ್ಚಿಸುವ ಮನೋಭಾವ ಯಾರಲ್ಲೂ ಇರುವುದಿಲ್ಲ, ಇದಕ್ಕೆ ಬಲಿಯಾಗಿದ್ದು ಹೆಣ್ಣು. ಪ್ರತಿಯೊಂದರ ಹೊಣೆ ಅವಳೆಯಾಗಿರುತ್ತಾಳೆ. ಫಣಿಯ ಗಂಡ ಸಾಯುವುದಕ್ಕೇ ಅವಳ ಜಾತಕವೇ ಕಾರಣ ಎಂದು ಎಲ್ಲರು ತಿಳಿದುಕೊಳ್ಳುತ್ತಾರೆ.

ಬಾಲ್ಯವಿವಾಹ ಪದ್ಧತಿಯನ್ನು ನಾವು ಎಲ್ಲ ಕಾಲದಲ್ಲೂ ಕಾಣಬಹುದು. ಈ ಪದ್ಧತಿಯನ್ನು ಸಿನಿಮಾದಲ್ಲಿ ಹಾಸ್ಯವಾಗಿ ಬಿಂಬಿಸಿದ್ದಾರೆ. ವಿವಾಹ ಸಂದರ್ಭದಲ್ಲಿ ಹೆಣ್ಣು ನಾಚಿಕೊಳ್ಳುವುದು ಸಹಜ. ಆದರೆ ಈ ಚಿತ್ರದಲ್ಲಿ ನಿರ್ದೇಶಕಿಯು ಬಾಲ್ಯವಿವಾಹದ ಸಂದರ್ಭವನ್ನು ಉದ್ದೇಶ ಪೂರ್ವಕವಾಗಿಯೇ ವಿಡಂಬಿಸಿದ್ದಾರೆ. ಜಡೆಯೊಂದಿಗೆ ಆಟವನ್ನಾಡುತ್ತ ಅವಳದೇ ಲೋಕದಲ್ಲಿ ಮಗ್ನಳಾಗಿರುವಳು. ಸೀರೆಯ ಉಡುಗೆ, ಆಭರಣಗಳ ಭಾರವನ್ನು ಅ ಪುಟ್ಟಕಂದ ಹೇಗೆ ತಾನೇ ಸಹಿಸಿಕೊಂಡಿತು. ಆಡುವ ವಯಸ್ಸಿನಲ್ಲಿ

ಕೈಯಲ್ಲಿ ಗೋಲಿ, ಬುಗುರಿ ಅಂತಹ ಆಟಿಕೆಗಳನ್ನು ಹಿಡಿಯುವ ಸಮಯದಲ್ಲಿ ಬಾಸಿಂಗವನ್ನು ಸರಿಪಡಿಸಿಕೊಳ್ಳುವ ಪರಿಸ್ಥಿತಿ ಫಣಿಯ ಗಂಡ ನಂಜುಂಡನದ್ದು. ಜೀವನ ಎಂದರೇನು ಎಂದು ಅರಿಯದ ಮಕ್ಕಳಿಗೆ ಮದುವೆಯೆನ್ನುವ ಬಂಧನದಲ್ಲಿ ಸಿಲುಕಿಸುವರು. ನಂಜುಂಡ ತನ್ನ ಮದುವೆ ಸಮಾರಂಭದಲ್ಲಿ ನಡೆದ ಕಾರ್ಯಕ್ರಮಗಳಿಂದ ಸೋತು ಮುಂದೆ ಏನು ಎಂಬ ಪ್ರಶ್ನೆಗಳನ್ನು ಮತ್ತು ಮದುವೆಯ ಮೂಲ ಉದ್ದೇಶವಾದ ಪ್ರಸ್ತದ ಬಗ್ಗೆ ತನ್ನ ತಾಯಿ ಹತ್ತಿರ ಮಾತಾನಾಡುವನು ಜೊತೆಗೆ ಮೈ ನೆರೆಯುವುದು ಅಂದರೇನು ಎಂದು ಪ್ರಶ್ನಿಸುವ ಈ ದೃಶ್ಯವು ಬಾಲ್ಯವಿವಾಹ ಪದ್ಧತಿಯ ದುಃಸ್ಥಿತಿಯನ್ನು ಪ್ರಶ್ನಿಸುವಂತೆ ಮಾಡಿದೆ.

ಇದರ ಪರಿಣಾಮ ಚಿತ್ರದಲ್ಲಿ ಮೂರು ತಲೆಮಾರಿನ ವಿಧವೆಯರನ್ನು ಚಿತ್ರಿಕರಿಸಿದ್ದಾರೆ. ಕೊನೆಯದಾಗಿ ದ್ರಾಕ್ಷಾಯಣಿ ಇವುಗಳೆಲ್ಲವನ್ನು ಮೆಟ್ಟಿ ಸೌಭಾಗ್ಯ ತನ್ನೊಂದಿಗೆ ಇರುವಂತದ್ದು ವೈಧವ್ಯವನ್ನು ಸ್ವೀಕರಿಸುವುದಿಲ್ಲ ಎಂದು ದೃಢವಾಗಿ ನಿಲ್ಲುವಳು. ನಂತರ ತನ್ನ ಮೈದುನನಿಂದ ತಾಯಿಯಾಗುವಳು. ಇದನ್ನು ಫಣಿಯು ಕೂಡ ಒಪ್ಪುವಳು. ಕಾಲಕಾಲಕ್ಕೆ ಎಲ್ಲವೂ ಬದಲಾಗಬೇಕು ಎಂಬ ಸೂಕ್ಷ್ಮವನ್ನು ದ್ರಾಕ್ಷಿಯಣಿ ನೀಡುವಳು. ತಾನು ಕೂಡ ಅದರಂತೆ ನಡೆದುಕೊಂಡಳು. ಫಣಿಯನ್ನು ವಿಧವೆಯನ್ನಾಗಿ ಮಾಡುವ ಸಮಯದಲ್ಲಿ ಫಣಿಯ ತಾಯಿ, ತಂದೆ, ಚಿಕ್ಕಪ್ಪರು ಎಲ್ಲರೂ ಅಸಹಾಯಕರಾಗಿದ್ದರು. ನನಗೆ ಆದ ವ್ಯಥೆ ದ್ರಾಕ್ಷಾಯಣಿಗೂ ಬರಬಾರದು ಎಂದು ಎಲ್ಲರಿಗೂ ಹೇಳಿದಳು. ಅದರೆ ಬಲ್ಲವರೇ ಮೂಢಾಚರಣೆ ಮಾಡುವಾಗ ಇನ್ನು ಬೇರೆಯವರು ಏನು ಮಾಡಿಯಾರು. ಇದನ್ನು ಲೆಕ್ಕಸದೆ ತನ್ನ ಹಠದಿಂದಲೇ ಮೂಢಾಚರಣೆಗೆ ದ್ರಾಕ್ಷಯಣಿ ತಿಲಾಂಜಾಲಿಯನ್ನು ಇಟ್ಟಳು.

ಒಟ್ಟಾರೆಯಾಗಿ ನಿರ್ದೇಶಕಿ ವ್ಯಂಗ್ಯವಾಗಿ, ಹಾಸ್ಯವಾಗಿ ಮೂಢ ಆಚರಣೆಗಳು, ಶೋಷಿತ ಪದ್ಧತಿಗಳನ್ನು ವೈದಿಕ ಸಮುದಾಯದೊಳಗಡೆ ನಡೆಯುತ್ತಿರುವ ಬದಲಾವಣೆಯನ್ನು ಪ್ರತಿಬಿಂಬಿಸಿದ್ದಾರೆ. ಯಾವಾಗಲೂ ಬದಲಾವಣೆ ಎನ್ನುವುದು ನಿರ್ಬಂಧಗಳಾಚೆ ಕರೆದುಕೊಂಡು ಹೋಗುತ್ತದೆ ಎನ್ನುವುದನ್ನು ಫಣಿಯಮ್ಮ ಹಾಗೂ ದ್ರಾಕ್ಷಾಯಣಿ ಪಾತ್ರಗಳು ಸಾಬೀತುಪಡಿಸಿವೆ.

**ದೇವೀರಿ ಚಲನಚಿತ್ರ ಮತ್ತು 'ಸ್ತ್ರೀ' ಪ್ರತಿನಿಧೀಕರಣ**

ಇದು ಲಂಕೇಶ್‌ರವರ "ಅಕ್ಕ" ಕಾದಂಬರಿ ಆಧಾರಿತ ಚಿತ್ರವಾಗಿದೆ. ಕವಿತಾ ಲಂಕೇಶರವರು ಇದರ ನಿರ್ದೇಶಕರು. ಕ್ಯಾತನಿಂದ ಸಮಾಜದ ಅಂಕುಡೊಂಕುಗಳನ್ನು ತಿಳಿಸಿದ್ದಾರೆ. ಬಡತನ, ರಾಜಕೀಯ, ಶಿಕ್ಷಣ, ಕೌಟುಂಬಿಕ ವ್ಯವಸ್ಥೆ ಸಿನಿರಂಗದ ವ್ಯವಸ್ಥೆಯ ಬಗ್ಗೆ ಚಿತ್ರಕರಿಸಿದ್ದರೆ.

ಒಬ್ಬ ವ್ಯಕ್ತಿ ಸಾಮಾನ್ಯ ವ್ಯಕ್ತಿಯಿಂದ ಉನ್ನತವರ್ಗದವರೆಗೂ ಬೆಳೆಯುತ್ತಾನೆಂದರೆ ಇದಕ್ಕೆ ಕಾರಣ ಶಿಕ್ಷಣ. ನಾವು ವಾಸಿಸುವ ಸಮಾಜದಿಂದ ಅನೌಪಚಾರಿಕವಾಗಿ ಶಿಕ್ಷಣ ಸಿಗುತ್ತಿತ್ತು. ನಾಗರಿಕತೆ ಬೆಳೆದಂತೆಲ್ಲ ಸಮಾಜದಲ್ಲಿ ಪಾಠಶಾಲೆಗಳು ಪ್ರಾರಂಭವಾಗಿ ಔಪಚಾರಿಕವಾಗಿ ಶಿಕ್ಷಣ ದೊರೆಯುತ್ತಿದೆ. ಇದನ್ನೆ ವೃತ್ತಿಯನ್ನಾಗಿಸಿಕೊಂಡು ಕೆಲವು ವಿದ್ಯಾಸಂಸ್ಥೆಗಳು ಸ್ಥಾಪಿತವಾಗಿವೆ. ಹಣಕ್ಕಾಗಿ ಸ್ಥಾಪಿತಗೊಂಡಿರುವ ಶಾಲೆಗಳು ವಿದ್ಯಾದಾನದ ಬದಲು ಹಣದ ಸುಲಿಗೆಯನ್ನು ಪ್ರಾರಂಭಿಸಿವೆ. ಇತ್ತೀಚಿಗೆ ಶಿಕ್ಷಣವು ತೋರಿಕೆಯಾಗಿದೆ. ಈ ಚಿತ್ರದಲ್ಲಿ ದೇವೀರಿ ತನ್ನ ತಮ್ಮ ಓದಿ ದೊಡ್ಡ ವ್ಯಕ್ತಿಯಾಗಬೇಕೆಂಬ ಆಸೆಯಿಂದ ತಮ್ಮನನ್ನು ಶಾಲೆಗೆ ಕಳಿಸಲು ನಿರ್ಧರಿಸಿದಳು. ಅದರೆ ಹಣದಕೊರತೆಯಿಂದ ಸುಮ್ಮನೆ ಮನೆಕಡೆ ಮರಳುವಳು. ತನ್ನ ಬಾಯಿಗೆ ಬಂದ ಹಾಗೆ ಕೆಟ್ಟಕೆಟ್ಟ ಪದಗಳಿಂದ ಮಾಸ್ತರನ್ನು ಬೈಯವಳು. ಅವಳ ಬೈಗುಳ ವ್ಯಕ್ತಿಯ ನಿಂದನೆ ಹಾಗಿರುವುದಿಲ್ಲ, ಬದಲಿಗೆ ಅದು ವ್ಯವಸ್ಥೆಯ ನಿಂದನೆಯಾಗಿರುತ್ತದೆ. ಗುರುವಾದವನು ಹೇಗೆ ಇರಬೇಕು ಅವನ ಕರ್ತವ್ಯಗಳೇನು ಎಂಬುದನ್ನು ವ್ಯಂಗ್ಯವಾಗಿ ಚಿತ್ರೀಕರಿಸಿದ್ದಾರೆ. ಈ ಚಿತ್ರದಲ್ಲಿ ಶಿಕ್ಷಣದ ಮಹತ್ವ

ಮತ್ತು ಇಂದಿನ ಸಮಾಜ ಅದನ್ನು ಹೇಗೆ ಸ್ವೀಕರಿಸುತ್ತಿದೆ, ಒಬ್ಬ ವ್ಯಕ್ತಿ ಅವಿದ್ಯಾವಂತನಾಗಲು ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿರುವ ದೋಷಗಳೇನು ಎಂಬುದನ್ನು ಅತ್ಯಂತ ಸೂಕ್ಷ್ಮವಾಗಿ ಕ್ಯಾತನ ಪಾತ್ರದ ಮೂಲಕ ಚಿತ್ರೀಕರಿಸಿದ್ದಾರೆ. ಬಡತನದಲ್ಲಿ ಜನಿಸಿದ ಹೆಣ್ಣು ಎಂದರೆ ಎಲ್ಲರಿಗೂ ಸದರ. ಅವಳ ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಳ್ಳುವವರೇ ಹೆಚ್ಚು ಎನ್ನುವುದನ್ನು ದೇವೀರಿ ಪಾತ್ರದ ಮೂಲಕ ಇಲ್ಲಿ ಪ್ರತಿಬಿಂಬಿಸಿದ್ದಾರೆ. ಸರಿತಪ್ಪನ್ನು ಅರಿತರು ಪರಿಸ್ಥಿತಿಯನ್ನು ನೀಗಿಸಲು ಕೆಟ್ಟದಾರಿಯಲ್ಲಿ ನಡೆಯಬೇಕಾಗುತ್ತದೆ. ಆದರೆ ಅದನ್ನು ಹೊರತುಪಡಿಸಿ ಬದುಕನ್ನು ಕಟ್ಟಿಕೊಳ್ಳಬಹುದು ಎನ್ನುವುದನ್ನು ಕ್ಯಾತನ ಮನದಾಳದ ಮಾತು, ಕನಸು ಆಸೆಗಳ ಮೂಲಕ ತಿಳಿಸಿದ್ದಾರೆ. ಬಡತನದ ಬಗ್ಗೆ ಈ ಚಿತ್ರದಲ್ಲಿ ಪ್ರಾರಂಭದಿಂದ ಅಂತ್ಯದವರೆಗೂ ಒಂದೊಂದೇ ಸನ್ನಿವೇಶಗಳನ್ನು ಚಿತ್ರೀಕರಿಸಿದರೆ ಯಾರನ್ನೂ ದೂಷಿಸದೆ ಸನ್ನಿವೇಶಕ್ಕೆ ತಕ್ಕ ಹಾಗೆ ಬದಲಾಗುವ ಮನಸ್ಥಿತಿ ಮತ್ತು ಅದರೊಳಗೆ ತಮ್ಮ ಕನಸಿನ ಈಡೇರಿಕೆಗಾಗಿ ತೋರಿದ ಅಸಹಾಯಕತೆಯನ್ನು ಚಿತ್ರಿಸಲಾಗಿದೆ. ಯೋಚನೆಗಳು ಬದಲಾದಾಗಲೇ ಸಮಾಜದಿಂದ ಈ ಬಡತನ ಎನ್ನುವ ಪಿಡುಗು ಮಾಯವಾಗುವುದು ಎಂಬ ಆಶಯವನ್ನು ನಿರ್ದೇಶಕಿ ತುಂಬ ಸೊಗಸಾಗಿ ಮನಮುಟ್ಟುವಂತೆ ಚಿತ್ರೀಕರಿಸಿದ್ದಾರೆ.

ಸಮಾಜದಲ್ಲಿ ಹಲವು ವ್ಯಕ್ತಿಗಳಿಂದ ಕುಟುಂಬವು ನಿರ್ಮಿತವಾಗಿರುತ್ತದೆ. ಕುಟುಂಬಗಳು ವ್ಯವಸ್ಥಿತವಾಗಿ ಸಾಗಿದರೆ ಸಮಾಜವು ಸುಗಮವಾಗಿ ಸಾಗುತ್ತದೆ. ಈ ಸಿನಿಮಾದಲ್ಲಿ ಹಲವು ರೀತಿಯ ಕುಟುಂಬ ವ್ಯವಸ್ಥೆಯನ್ನು ಕಾಣಬಹುದು. ಸಿನಿಮಾವನ್ನು ಸಮಾಜವಾಗಿ ಪ್ರತಿಬಿಂಬಿಸಿ ನೋಡಬೇಕಾಗಿದೆ. ಪೋಷಕರನ್ನು ಕಳೆದುಕೊಂಡ ದೇವೀರಿ ಮತ್ತು ಕ್ಯಾತ ಹೊಟ್ಟೆಪಾಡಿಗಾಗಿ ಪರದಾಡುವ ಸ್ಥಿತಿ ಬಂದಾಗ ದೇವೀರಿಗೆ ಅನಿವಾರ್ಯವಾಗಿ ಅಸಹಾಯಕತೆಯಿಂದ ಅನೈತಿಕ ಕಾರ್ಯದಲ್ಲಿ ತೊಡಗುವಳು. ಇದರಿಂದ ಕ್ಯಾತ ಒಂದು ಸಾರಿ ನಕರಾತ್ಮಕವಾಗಿ ಇನ್ನೊಂದು ಸಾರಿ ಸಕರಾತ್ಮಕವಾಗಿ ಅವಳ ಬಗ್ಗೆಯೇ ಯೋಚಿಸುವನು. ಯೋಚನೆಯಿಂದಲೇ ತಂದೆ ತಾಯಿಯಿಲ್ಲದ ಪರಿಸ್ಥಿತಿಯ ಬಗ್ಗೆ ತಿಳಿಸುತ್ತಾ ನಡೆಯುವನು.

ಈ ಚಿತ್ರದಲ್ಲಿ ಕೆಲವು ನೈಜ ಚಿತ್ರಣವನ್ನು ಪದ್ಮಿನಿ ಮೂಲಕ ಹೇಳುತ್ತಾ ಹೋಗಿದ್ದರೆ ಕಲೆಗಿಂತ ಅವಳ ಮೈ ಬಣ್ಣವೇ ಅವರಿಗೆ ಬೇಕಾಯ್ತು. ಇದನ್ನು ಅರಿಯದೆ ತನ್ನ ಕನಸನ್ನು ಈಡೇರಿಕೆಗಾಗಿ ಹಲವಾರು ಪ್ರಯತ್ನವನ್ನು ಪದ್ಮ ನಡೆಸುವಳು. ಇದಕ್ಕೆ ಪ್ರೋತ್ಸಾಹವಾಗಿ ಅವರ ತಂದೆ ನಿಲ್ಲುವನು. ಆದರೆ ಇಲ್ಲಿ ಯಾವ ಪ್ರಯೋಜನವೂ ಆಗದು ಬೆಂಬಲದ ಜತೆಗೆ ರಕ್ಷಣೆಯ ಜವಾಬ್ದಾರಿ ಸುರಕ್ಷತೆ ಬಗ್ಗೆ ಯೋಚಿಸದೆ ಮುಳ್ಳಿನ ಹಾದಿಯ ಮೇಲೆ ನಡೆಯುವಂತೆ ಮಾಡುವನು. ಇಲ್ಲಿ ತಂದೆಯ ಪಾತ್ರವನ್ನು ಅಸಹನೀಯವಾಗಿ ಮಗಳ ಬೆಂಬಲದಲ್ಲಿ ಇರುವುದಾಗಿ ಬಿಂಬಿಸಿದ್ದಾರೆ. ಇದರಿಂದ ಮುಂದಿನ ಭವಿಷ್ಯದ ಬಗ್ಗೆ ಯೋಜಿತವಾಗಿ ಹಿಂದೆ ನಾವುಗಳು ಒಳಿತು ಕೆಡುಕುಗಳ ಬಗ್ಗೆ ಆಲೋಚಿಸಿ ಹೆಜ್ಜೆಯನ್ನಿಡಬೇಕು.

ಈ ಸಿನಿಮಾದಲ್ಲಿ ಪ್ರತೀ ಪಾತ್ರದಿಂದ ಹಾಗೆ ಪ್ರತಿ ಸನ್ನಿವೇಶದಿಂದ ಕುಟುಂಬ ವ್ಯವಸ್ಥೆಯನ್ನು ಬಿಂಬಿಸಿದ್ದಾರೆ. ಈ ಸಿನಿಮಾ ಇಡೀ ಸ್ಲಮ್ಮಿನ ಮೂಲಕ ಇಂದಿನ ಹದಗೆಟ್ಟ ರಾಜಕೀಯ ಅಸಂಬದ್ಧ ಚಳವಳಿಗಳು, ದಾರಿತಪ್ಪಿದ ಶಿಕ್ಷಣ, ಆಡಳಿತದ ಭ್ರಷ್ಟತೆ, ಬಡತನ, ಹಸಿವಿನ ತೀವ್ರತೆ, ಅಸಹಾಯಕತೆಯನ್ನು ದುರ್ಬಳಕೆ ಮಾಡಿಕೊಳ್ಳುವ ವ್ಯವಸ್ಥೆ, ನಗರದಲ್ಲಿನ ಗೂಂಡಾಗಿರಿ ಹೀಗೆ ನಗರಜೀವನದ ಹುಳುಕುಗಳ ಮೂಲಕ ಇಂದಿನ ಸಮಾಜದ ಎಲ್ಲಾ ಆಯಾಮಗಳನ್ನು ಸೂಕ್ಷ್ಮವಾಗಿ ಬಿಚ್ಚಿಡಲು ಪ್ರಯತ್ನಿಸುವ ದೇವೀರಿ ಚಲನಚಿತ್ರ ಪ್ರಸ್ತುತತೆಯನ್ನು ಕಾಪಾಡಿಕೊಳ್ಳುತ್ತದೆ.

**ಮುಖಪುಟ ಚಲನಚಿತ್ರ ಮತ್ತು 'ಸ್ತ್ರೀ' ಪ್ರತಿನಿಧೀಕರಣ**

'ಮುಖಪುಟ' ರೂಪಾ ಅಯ್ಯರ್ ಅವರಿಂದ ನಿರ್ಮಿತವಾದ ಚಿತ್ರವಿದು. ಈ ಚಿತ್ರದಲ್ಲಿ ಅಲೆಮಾರಿ ಜೀವನ ನಡೆಸುವ ಜನರಲ್ಲಿ ಶಿಕ್ಷಣದ ಅರಿವೇ ಇರುವುದಿಲ್ಲ. ಅದರ ಮಹತ್ವದ ಬಗ್ಗೆ ತಿಳಿಸಿ ಅವರಿಗೂ ಅಕ್ಷರಜ್ಞಾನ ಬೇಕು ಎಂಬ ಅರಿವನ್ನು ಲಕ್ಷ್ಮೀ ಪಾತ್ರದ ಮೂಲಕ ಕಟ್ಟಿಕೊಟ್ಟಿದ್ದಾರೆ. ಯಾವ ವಿಷಯವನ್ನು ಓದುತ್ತೇವೆ ಎನ್ನುವುದು ಮುಖ್ಯವಾಗಿರುವುದಿಲ್ಲ. ಅವುಗಳ ಜ್ಞಾನವನ್ನು ಪ್ರತಿನಿತ್ಯದಲ್ಲಿ ನಮ್ಮ ಜೀವನಕ್ಕೆ ಹೇಗೆ ಅಳವಡಿಸಿಕೊಳ್ಳುತ್ತೇವೆ ಎನ್ನುವುದು ಮುಖ್ಯ ಇದನ್ನು ಗೌರಿಯ ಗುರುವಿನ ಮೂಲಕ ತಿಳಿಸಿದ್ದಾರೆ.

ತಂದೆ ತಾಯಿಗಳ ನಿರ್ಧಾರ ಮಕ್ಕಳ ಭವಿಷ್ಯದ ಮೇಲೆ ಪರಿಣಾಮ ಬೀರುತ್ತದೆ. ಭಾಗವತಿಯ ಪುಟ್ಟಕಂದಮ್ಮನೆ ಇದಕ್ಕೆ ಸಾಕ್ಷಿ. ನಿರ್ದೇಶಕಿ ಈ ಚಿತ್ರದ ಮೂಲಕ ಆತ್ಮಹತ್ಯೆ ಎನ್ನುವ ಕ್ರೂರ ನಿರ್ಧಾರದ ಬಗ್ಗೆ ಶೋಚನೀಯವಾಗಿ ಚಿತ್ರಿಸಿದ್ದಾರೆ. ಜೀವಿಸುವ ಹಕ್ಕು ಎಲ್ಲರಿಗೂ ಇದೆ. ಕ್ಷಣಿಕ ಕಷ್ಟಕ್ಕಾಗಿ ಸಾಯುವುದು ಸರಿಯಲ್ಲ. ಉಳಿದ ಸಂಬಂಧಗಳ ನರಳಾಟ ಯಾವ ನರಕಕ್ಕೆ ಕಮ್ಮಿಯಿಲ್ಲ. ಪೋಷಕರು ಈ ಕೃತ್ಯಕ್ಕೆ ಬಲಿಯಾದರೆ ಮಕ್ಕಳು ಅನಾಥರಾಗಿ ತಮ್ಮ ಭವಿಷ್ಯ ರೂಪಿಸಿಕೊಳ್ಳಲಿಕ್ಕಾಗದೆ ಅಸಹಾಕತೆಯಲ್ಲಿ ಜೀವನ ಸಾಗಿಸಬೇಕಾಗುತ್ತದೆ. ಈ ಚಿತ್ರದಲ್ಲಿ ಎಚ್ಐವಿ ಏಡ್ಸ್ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ನೀಡಲಾಗಿದೆ. ತಂದೆ ತಾಯಿಗಳು ಮಾಡುವ ತಪ್ಪಿನಿಂದಾಗಿ ಎಷ್ಟೋ ಮಕ್ಕಳು ಇವತ್ತು ಶಿಕ್ಷೆ ಅನುಭವಿಸುತ್ತಿದ್ದಾರೆ. ಶುದ್ಧ ಪ್ರೇಮ ಶುದ್ಧ ಕಾಮಕ್ಕೆ ಪ್ರಾಮುಖ್ಯತೆ ಕೊಡದೆ, ಅತಿಯಾಗಿ ನಡೆಸುತ್ತಿರುವ ಲೈಂಗಿಕ ಸಂಪರ್ಕದಿಂದ ಮಕ್ಕಳನ್ನು ಸಾವಿನ ದಾರಿಗೆ ನೂಕಿದ್ದಾರೆ. ಮಕ್ಕಳು ಚಿಕ್ಕವರಿರಬಹುದು, ಅವರುಗಳಿಗೆ ಜೀವನದ ಸತ್ಯಾಂಶವು ಈಗಿನಿಂದಲೇ ತಿಳಿಯಬೇಕು. ಇವತ್ತಿನ ಜೀವನವನ್ನು ತಿಳಿದುಕೊಂಡಾಗಲೇ ಮುಂದಿನ ಜೀವನದ ಬಗ್ಗೆ ಒಳ್ಳೆಯ ನಿರ್ಧಾರ ಮಾಡಲು ಸಾಧ್ಯ. ಇದನ್ನು ಭಾಗವತಿಯ ಪ್ರಶ್ನೆಯ ಮೂಲಕ ವ್ಯಕ್ತಪಡಿಸುತ್ತಾ ಹೋಗಿದ್ದಾರೆ.

"ವೈದ್ಯೋ ನಾರಾಯಣೋ ಹರಿಃ" ವೈದ್ಯ ಸಾಕ್ಷಾತ್ ದೇವರ ಸ್ವರೂಪ ಅವನಲ್ಲಿ ಯಾವುದೇ ಕಲ್ಮಶ ಭಾವನೆ ಇರುವುದಿಲ್ಲ, ರೋಗಿಗಳನ್ನು ಗುಣಪಡಿಸುವುದು ಶಸ್ತ್ರಚಿಕಿತ್ಸೆ ಮತ್ತು ಮಾತ್ರೆಗಳಿಂದ ಅಷ್ಟೇ ಅಲ್ಲ, ಸಕಾರಾತ್ಮಕತೆಯ ಮಾತು ಹಾಗೂ ಶಕ್ತಿ ಇವುಗಳಿಂದಲೇ ಅರ್ಧರೋಗವನ್ನು ಗುಣಪಡಿಸಬಹುದು. ಯಾವುದೇ ಕಾಯಿಲೆ ಇರಲಿ ಚಿಕಿತ್ಸೆ ಇಲ್ಲದೆ ಇರುವುದಿಲ್ಲ ಅದೇ ರೀತಿ ರೋಗಿಯನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳಬೇಕು, ವೈದ್ಯರು ತಮಗೆ ಚಿಕಿತ್ಸೆ ಕೊಡೋದಕ್ಕೆ ಆಗದಿದ್ದಲ್ಲಿ ರೋಗಿಯನ್ನು ನಿಂದಿಸಬಾರದು ವೈದ್ಯ ಅಷ್ಟೇ ಅಲ್ಲ ಪ್ರತಿಯೊಬ್ಬರೂ ಇದನ್ನು ಅರಿಯಬೇಕು, ಎಲ್ಲವುದಕ್ಕಿಂತ ದೊಡ್ಡ ಖಾಯಿಲೆ ಅನುಮಾನ, ತಿರಸ್ಕಾರ ಭಾವನೆ. ಇವುಗಳಿಗೆ ಯಾವುದೇ ಔಷಧಿ ಚಿಕಿತ್ಸೆ ಇಲ್ಲ. ಇದನ್ನು ತೊರೆದು ಅರ್ಥೈಸಿ ನಡೆದಾಗಲೇ ಸುಭದ್ರತೆ ನೆಲೆಯನ್ನು ಕಟ್ಟಲು ಸಾಧ್ಯ ಎಂಬುದನ್ನು ರೂಪ ಅಯ್ಯರ್‌ರವರು ಭಾಗವತಿಯ ಪಾತ್ರದ ಮೂಲಕ ಹಾಗೂ ವೈದ್ಯ, ಶಿಕ್ಷಕರು, ಮನೆಯವರ ಮೂಲಕ ಚಿತ್ರೀಕರಿಸಿದ್ದಾರೆ.

ಜೀವಾತ್ಮಕ್ಕೆ ಹುಟ್ಟು ಸಾವು ಎಂಬುದು ಇಲ್ಲ, ಅದು ನಮ್ಮ ದೇಹಕ್ಕೆ ಮಾತ್ರ ಸೀಮಿತ. ವಯಸ್ಸಿಗನುಗುಣವಾಗಿ ಬುದ್ದಿ ಮನಸ್ಸು ತನ್ನದೇ ಆದ ರೂಪದಲ್ಲಿ ಬೆಳವಣಿಗೆ ಕಾಣುತ್ತವೆ. ಆದರೆ ಪಂಚಗುಣಗಳು ನಮ್ಮ ಆತ್ಮದಲ್ಲಿಯೇ ಇರುತ್ತವೆ.

ಒಟ್ಟಾರೆ ಈ ಚಿತ್ರ ಒಂದು ಆಧ್ಯಾತ್ಮಿಕ ನೆಲೆಯಲ್ಲಿ ಕಥೆ ಕಟ್ಟುತ್ತ ಸಾಗಿದೆ. ಜೀವನ ಸತ್ಯಾಂಶವನ್ನು ಅರಿತು ಮನುಷ್ಯನು ಬದುಕಬೇಕು. ಎಲ್ಲರನ್ನೂ ಸಮಾನವಾಗಿ ಕಾಣುವ ಮನಸ್ಥಿತಿ ಎಲ್ಲರಲ್ಲಿ ಬರಬೇಕು. ಮುಖ್ಯವಾಗಿ ಎಚ್ಐವಿ ಬಗ್ಗೆ ಮತ್ತು ಅದರಿಂದ ಆಗುವ ತೊಂದರೆಗಳನ್ನು ಸೂಕ್ಷ್ಮದಲ್ಲಿ ಚಿತ್ರೀಕರಿಸಿದ್ದಾರೆ. ತಾಯಿಯ ಪ್ರೀತಿ

ಸಂಬಂಧೇತರವಾಗಿ ಪ್ರತಿನಿಧಿಸಿ ಪ್ರೀತಿ ಮತ್ತು ಸಂಬಂಧವನ್ನು ಭಾವನಾತ್ಮಕತೆಯಲ್ಲಿ ಬಂಧಿಸಿ ಅನಂತತೆಯಲ್ಲಿ ಕೇಂದ್ರೀಕರಿಸಿದ್ದಾರೆ. ಗುರುಕುಲ ಪದ್ಧತಿಯಲ್ಲಿ ಕಾಣುವ ಸಮಾನತೆ ಮಾರ್ಡನ್ ಶಾಲೆಯಲ್ಲಿ ಸಮಾನತೆಯ ಹೆಸರಲ್ಲಿ ನಡೆಯುತ್ತಿರುವ ಅವಘಡಗಳನ್ನು ಮುಖಪುಟ ಚಿತ್ರದಲ್ಲಿ ವ್ಯಂಗ್ಯಾತ್ಮಕವಾಗಿ ಚಿತ್ರಿಸಿದ್ದಾರೆ. ಎಲ್ಲರಲ್ಲಿ ಎಲ್ಲವನ್ನು ನಿಭಾಯಿಸುವ ಶಕ್ತಿ ಇರುತ್ತದೆ. ಇದನ್ನು ಅರಿತು ಮುನ್ನಡೆಯಬೇಕು ಎಂಬುದನ್ನು ಈ ಚಿತ್ರದಲ್ಲಿ ರೂಪ ಅಯ್ಯರ್‌ರವರು ತುಂಬಾ ಅಚ್ಚುಕಟ್ಟಾಗಿ ಚಿತ್ರಿಸಿದ್ದಾರೆ.

**ಯಾನ ಚಿತ್ರಚಲನಚಿತ್ರ ಮತ್ತು 'ಸ್ತ್ರೀ' ಪ್ರತಿನಿಧೀಕರಣ**

ನಿರ್ದೇಶಕಿ ವಿಜಯಲಕ್ಷ್ಮಿ ಸಿಂಗ್ ಅವರು ಈ ಜನರೇಷನ್‌ನ ಯುವ ಮನಸ್ಸುಗಳನ್ನು ಗುರಿಯಾಗಿಟ್ಟುಕೊಂಡೇ ಇಡೀ ಸಿನಿಮಾ ರೂಪಿಸಿದ್ದಾರೆ. ಜೀವನದಲ್ಲಿ ಯಾವುದು ಮುಖ್ಯ, ಯಾವುದು ಅನಾವಶ್ಯಕ ಎಂದು ತಮ್ಮದೇ ಸ್ಟೈಲಿನಲ್ಲಿ ಹೇಳುತ್ತ ಸರಿ–ತಪ್ಪುಗಳನ್ನು ನೋಡುಗರಿಗೆ ಬಿಡುತ್ತಾರೆ. ಅಲ್ಲದೆ ಇದು ಮಹಿಳಾ ಪ್ರಧಾನ ಸಿನಿಮಾ. ಹಾಗಂತ ನೋವು, ವ್ಯಥೆಗಳನ್ನು ಹೇಳಿಕೊಳ್ಳುವ ಚಿತ್ರವಲ್ಲ. ಪ್ರಸ್ತುತ ತಲೆಮಾರಿನ ಹುಡುಗ– ಹುಡುಗಿಯರ ಬದುಕು, ತವಕ, ತಲ್ಲಣಗಳನ್ನು ತೆರೆದಿಡುವ ಹೊಸ ಪ್ರಯಣ. ಅದೇ 'ಯಾನ'ದ ಮುಖ್ಯ ಕೇಂದ್ರಬಿಂದು.

ಪುತ್ರಿಯ ವ್ಯಾಮೋಹಕ್ಕೆ ಸಿಲುಕಿ ಆಕೆಯನ್ನು ಉನ್ನತ ಶಿಕ್ಷಣಕ್ಕೆ ಕಳಿಸುವುದುಕ್ಕೆ ಅವರ ಪ್ರೀತಿ ತಡೆಯಾಗುವುದುದಲ್ಲದೆ. ಸಾಂಪ್ರಾದಾಯಿಕ ಕುಟುಂಬಗಳು ಸಂಸ್ಕೃತಿಯ ಜೊತೆಗೆ ಭಯವನ್ನು ಮೈಗೂಡಿಸಿಕೊಂಡಿರುತ್ತಾರೆ. ಹೊರಗಿನ ಪ್ರಪಂಚದ ಬಗ್ಗೆ ಅಂಜಿಕೆಯ ಮನೋಭಾವವಿರುತ್ತದೆ. ಹೆಣ್ಣು ಮನೆಯ ಗೌರವದ ಸೂಚಕ ಅವಳಿಗೆ ಏನಾದರೂ ಆಗಬಹುದು ಎಂಬ ಭಯದಲ್ಲಿ ಹೊರಗಿನ ಪ್ರಪಂಚಕ್ಕೆ ಅವಳನ್ನು ಪರಿಚಯಸುವುದಿಲ್ಲ ಹಾಗೂ ಅವಳಿಗೂ ಪ್ರಪಂಚದ ಪರಿಚಯ ಮಾಡಿಸುವುದಿಲ್ಲ. ಕುಟುಂಬದ ಅತಿಯಾದ ಕಾಳಜಿ ಪ್ರೀತಿ ಅವರಿಗೆ ಮುಳುವಾಗುತ್ತಿದೆ ಎನ್ನುವ ಅರಿವಿಲ್ಲದೆ ಒಂದು ಕಟ್ಟುನಿಟ್ಟಾದ ಚೌಕಟ್ಟಿನಲ್ಲಿ ಬಂಧಿಸುವರು. ಇದನ್ನೆಲ್ಲ ಮೆಟ್ಟಿನಿಂತು ನಾಯಕಿ ಈ ಬಂಧನದಿಂದ ಬಿಡಿಸಿಕೊಂಡು ಉನ್ನತ ಶಿಕ್ಷಣದ ಆಶಯದೊಂದಿಗೆ ಅಭ್ಯಾಸದ ಹಾದಿಯನ್ನು ಹಿಡಿಯುವಳು. ಸಂಪ್ರದಾಯಗಳಾಚೆಗೆ ಶಿಕ್ಷಣದ ಮೂಲಕ ಆಧುನಿಕತೆಗೆ ಪ್ರವೇಶಿಸುವುದನ್ನು ಅಂಜಲಿ ಪಾತ್ರದ ಮೂಲಕ ತಿಳಿಸಿದ್ದಾರೆ.

ಕಾಲ ಬದಲಾದಂತೆ ನೈತಿಕ ಮೌಲ್ಯಗಳು ಅಳಿವಿನ ಅಂಚಿನಲ್ಲಿವೆ ಮೋಜು ಮಸ್ತಿ ಹೆಸರಿನಲ್ಲಿ ಅನೈತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಆಧುನಿಕತೆ ಮೈಗೂಡಿಸಿಕೊಂಡು ಅತಿರೇಕಕ್ಕೆ ಹೋಗದ ಮಾಯಾ ತನ್ನ ಸ್ನೇಹಿತರಿಂದ ತಪ್ಪಿಸ್ಥಳಾಗುವವಳು. ಸಮಾಜದಲ್ಲಿ ಹೇಗೆ ಬಿಂಬಿಸಲ್ಪಡುತ್ತಿವಿ. ಹಾಗೆ ನಮ್ಮ ಸುತ್ತಮುತ್ತಲಿನ ಪರಿಸರ ಸ್ನೇಹಿತರ ಪ್ರಭಾವ ನಮ್ಮ ಮೇಲೆ ಪರಿಣಾಮ ಬೀರುತ್ತದೆ. ಇದರಿಂದ ನಮ್ಮ ಜೀವನವು ನಾಶವಾಗುವ ಸಂದರ್ಭವು ಇದೆ. ಕೆಟ್ಟದಾಗುತ್ತಿದೆ ಎಂದರೆ ಅದರಿಂದ ದೂರ ಇರು ಎನ್ನುವ ತಾಯಿ, ತನ್ನ ಮಗಳು ಯಾವ ತಪ್ಪನ್ನೂ ಮಾಡಿಲ್ಲ. ಮಾರ್ಡನ್ ಒಳಗೂ ತನ್ನ ತನವನ್ನು ಕಾಪಾಡಿಕೊಂಡು ಯಾವುದೇ ಅತಿರೇಖಕ್ಕೆ ಹೋಗುವುದಿಲ್ಲ ಎಂದು ನಂಬುವ ತಂದೆಯ ನಂಬಿಕೆ ಇಲ್ಲಿ ಅಗಾಧವಾಗಿ ಮೂಡಿಬಂದಿದೆ.

ಈ ಸಿನಿಮಾದಲ್ಲಿ ನಾವು ಮುಖ್ಯವಾಗಿ ಮೂವರು ಸ್ನೇಹಿತರನ್ನು ಕಾಣುತ್ತೇವೆ. ವಿಭಿನ್ನ ಮನಸ್ಥಿತಿಯೊಂದಿಗೆ ಭಿನ್ನ ಸಮಸ್ಯೆಗಳಿಂದ ಒಂದಾಗಿ ತಮ್ಮಲ್ಲಿಯೇ ಆ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡರು. ಇಲ್ಲಿ ತಂದೆಯ ಪ್ರೀತಿಯನ್ನು ಎರಡುರೀತಿಯಲ್ಲಿ ತೋರಿಸಿದ್ದಾರೆ. ಒಂದು ರಕ್ತಸಂಬಂಧ ಇಲ್ಲಿ ವ್ಯಕ್ತಿಗೆ ಮಹತ್ವಕ್ಕಿಂತ ವ್ಯಕ್ತಿಗತವನ್ನು ಪಾಲಿಸುವನು. ಇದರಿಂದ ತನ್ನದು ಎನ್ನುವ ಸಂಬಂಧವನ್ನು ಇಲ್ಲಿ ದೂರಮಾಡುವನು. ಇನ್ನೊಬ್ಬ ರಕ್ತಸಂಬಂಧ ಇಲ್ಲದಿದ್ದರೂ ತಂದೆಯ ಪ್ರೀತಿ ಕಾಳಜಿಯನ್ನು ತೋರಿಸಿದನು. ಪ್ರೀತಿ

ಇರಬೇಕು ಆದ್ರೆ ಆ ಪ್ರೀತಿ ಹಿಂಸೆ ಆಗಬಾರದು ಹೆಣ್ಣಿಗೆ ಶೀಲವೇ ಮುಖ್ಯ ಅವಳಿಂದ ಅದನ್ನು ಕಿತ್ತರೆ ಅವಳಿಗೆ ಜೀವನವೇ ಇಲ್ಲ ಎಂಬ ಮನೋಭಾವನೆ, ಗಂಡಾದವನು ಹೆಣ್ಣನ್ನು ತುಳಿಯಲು ಅವಳ ಮೇಲೆ ಉಪಯೋಗಿಸುವ ಅಸ್ತ್ರವೇ ಪ್ರೀತಿ ಆಗಿರುತ್ತದೆ. ಎದುರು ನಿಂತರೆ ನಾಯಿ ಕೂಡ ನಮ್ಮನ್ನು ಹೆದರಿಸುತ್ತದೆ. ಅದೇ ಧೈರ್ಯದಿಂದ ಮುನ್ನುಗ್ಗಿದ್ದರೆ ಹುಲಿ ಕೂಡ ಹೆದರಿಕೊಂಡು ಓಡಿ ಹೋಗುತ್ತದೆ. ಹೆಣ್ಣುಮಕ್ಕಳು ಅವಮಾನ ಎದುರಿಸಿ ನಿಂತ ದಿನ ಗಂಡಸರ ಗಂಡಸ್ತನ ಶೂನ್ಯವಾಗುತ್ತದೆ. ಜೀವನದಲ್ಲಿ ಏನೇ ಕಷ್ಟ ಬಂದರೂ ಎದುರಿಸಬೇಕು ಎನ್ನುವುದನ್ನು ನಿರ್ದೇಶಕಿ ಅಚ್ಚಳಿಯದಂತೆ ಚಿತ್ರಿಸಿದ್ದಾರೆ.

**ಕಿರಗೂರಿನ ಗಯ್ಯಾಳಿಗಳು ಚಲನಚಿತ್ರ ಮತ್ತು 'ಸ್ತ್ರೀ' ಪ್ರತಿನಿಧೀಕರಣ**

ಈ ಚಿತ್ರವು ಹಳ್ಳಿಗಾಡಿನಂತಿದ್ದರೂ ವರ್ಣಮಯ ವಾಗಿದೆ. ಎದ್ದುಕಾಣುವ ಪಾತ್ರಗಳು. ಈ ಚಿತ್ರದಲ್ಲಿ ಕೆಲವು ಹಳ್ಳಿಯ ಅಧಿಕಾರಿಗಳ ಮನಸ್ಸಿನಲ್ಲಿರುವ ದುರಾಶೆ ಮತ್ತು ಹಳ್ಳಿಯಲ್ಲಿರುವ ಪುರುಷರ ಮನಸ್ಸಿನಲ್ಲಿ ಸುಲಭವಾಗಿ ಅಲೆದಾಡುವ ಒಳ ಮನಸ್ಸಿನ ನಡುವಿನ ತೊಳಲಾಟವನ್ನು ಕಾಣಬಹುದು. ಕಿರಗೂರಿನ ರೌಡಿ ಮಹಿಳೆಯರಿಗೆ ಅಷ್ಟೇ ಮುಖ್ಯವಾದ ಪಾತ್ರವಿದೆ. ನಿರ್ದೇಶಕಿ ಬುದ್ಧಿವಂತಿಕೆಯಿಂದ ಪಾತ್ರಗಳನ್ನು ಮತ್ತು ಘಟನೆಗಳನ್ನು ಹೆಣೆದಿದ್ದಾರೆ. ಎಲ್ಲ ಪಾತ್ರಗಳಿಂದ ಅತ್ಯುತ್ತಮವಾದದ್ದನ್ನು ಹೊರ ತೆಗೆದಿದ್ದಾರೆ.

ಈ ಸಿನಿಮಾದಲ್ಲಿ ಜಾತಿ ವ್ಯವಸ್ಥೆಯ ಬಗ್ಗೆ ತಿರಸ್ಕಾರದ ಭಾವನೆಯನ್ನು ಕಾಣಬಹುದು. ಆದರೆ ಕುತಂತ್ರದಿಂದ ಅವರುಗಳ ಮಧ್ಯೆ ಜಾತಿಯ ಬೀಜವನ್ನು ಬಿತ್ತುವರು. ಇಲ್ಲಿ ಮೌಢ್ಯತೆಯನ್ನು ನಂಬುವ ಜನ ವ್ಯಕ್ತಿಯ ವ್ಯಕ್ತಿತ್ವವನ್ನು ನಂಬುವಲ್ಲಿ ಹಿಂದೇಟು ಹಾಕುವರು. ಒಂದು ಸುಳ್ಳಿನ ಕಂತೆ ಊರನ್ನೆ ದಿಕ್ಕು ತಪ್ಪಿಸಿ ಶಾಂತಿಯನ್ನು ಹಾಳು ಮಾಡುವುದು ಸಿನಿಮಾದ ಕೆಲವು ಸನ್ನಿವೇಶಗಳಲ್ಲಿ ಕಂಡು ಬರುತ್ತದೆ.

ಸ್ತ್ರೀ ಪ್ರಧಾನ ಚಿತ್ರವಾಗಿ ಸ್ತ್ರೀಯರ ಸಂಕಟಗಳನ್ನು ತೋರಿಸುವುದರ ಜತೆಗೆ ಚಿತ್ರದ ಸ್ತ್ರೀ ಪಾತ್ರಧಾರಿಗಳಲ್ಲಿ ತಪ್ಪನ್ನು ವಿರೋಧಿಸುವ ಮನೋಭಾವನೆ ಎದ್ದು ಕಾಣುವುದು. ಗಂಡು ತಪ್ಪು ಮಾಡಿದರೆ ಹೆಣ್ಣನ್ನು ನಿಂದಿಸುವರು ಅದೇ ತಪ್ಪು ಹೆಣ್ಣು ಮಾಡಿದರೆ ಅವಳು ನಡತೆಗೆಟ್ಟವಳು ಆಳದವಳು ಎನ್ನುವುದಕ್ಕೆ ಗಂಡೇ ಕಾರಣ ಎಂಬುದನ್ನು ಚಿತ್ರದಲ್ಲಿ ಅತ್ಯಂತ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ.

ಕಿರಗೂರಿನಲ್ಲಿ ಎಲ್ಲರು ಒಗ್ಗಟ್ಟಿನಿಂದ ಬದುಕುತಿದ್ದರು. ಅವರುಗಳನ್ನು ಕುತಂತ್ರದ ಆಡಳಿತಗಾರರು ವಿಭಜಿಸಲು ಜಾತಿ ಹಾಗೂ ರಾಜಕೀಯದ ಅಸ್ತ್ರವನ್ನು ಹೇಗೆ ಬಳಿಸಿಕೊಂಡರು ಎನ್ನುವುದನ್ನು ನಿರ್ದೇಶಕಿ ಒಳ್ಳೆಯ ಸಂದೇಶದೊಂದಿಗೆ ಚಿತ್ರಿಕರಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಹನೀಫ್, ಬಿ.ಎಂ. (2020). *ನಟಿಯರು ಬೇಕಾಗಿಲ್ಲ.* ಅನನ್ಯ ಪುಸ್ತಕಗಳು.
- ಗೋವಿಂದರಾಜು, ಸಿ.ಆರ್. (2017). *ಸಿನಿಮಾ ಸಂಕಥನ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಜೋಗಿ. (2016). *ಕಥೆ ಚಿತ್ರಕಥೆ ಸಂಭಾಷಣೆ ಜೋಗಿ.* ಸಾವಣ್ಣ ಎಂಟರ್‌ಪ್ರೈಸಸ್.
- ನಾಗೇಂದ್ರ. (2017). *ಸಿನಿಮಾ ಜಗತ್ತು.* ಶ್ರೀ ಚನ್ನಕೇಶವ ಸ್ವಾಮಿ ನಿಲಯ.
- ಪ್ರಶಾಂತ್ ನಾಯಕ್, ಜಿ. (2009). *ಕನ್ನಡ ಸಿನಿಮಾ ಲೋಕ.* ರಚನಾ ಪ್ರಕಾಶನ.
- ರಂಗನಾಥ, ಜಿ.ಎನ್. (2009). *ಪತ್ರಿಕೋದ್ಯಮ.* ಕಾಮಧೇನು ಪ್ರಕಾಶನ.
- ಶ್ರೀನಿವಾಸ್, ಪಿ.ಎನ್. (2003) *ಚಲನಚಿತ್ರ ನಿರ್ದೇಶಕ.* ಪುರೋಗಾಮ ಸಾಹಿತ್ಯ ಸಂಘ.